**ಸಿಸಿ ನಂಬರ್ಃ 669/2018**

**ಡಿ.ಡಬ್ಲ್ಯೂಃ 01**

ದಿನಾಂಕಃ 20-03-2023 ರಂದು ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಮ್.ವಿ.ಜಿ ವಕೀಲರಿಂದಃ**

07. ಪಿರ್ಯಾದಿ ದೂರಿನಲ್ಲಿ ಹೇಳಿಕೊಂಡ ಸಂಗತಿಗಳು ನಿಜವಿರುತ್ತವೆ ಅಂದರೆ ಸರಿಯಲ್ಲ. ಪಿರ್ಯಾದಿ ನೀಡಿದ ನೋಟಿಸ್ ನಾನೇ ಸ್ವೀಕರಿಸಿ ಸಹಿಯನ್ನು ಬೇರೆ ರೀತಿಯಲ್ಲಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಮಾನ್ಯ ಮಸ್ಕಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಪ್ರಕರಣವನ್ನು ಈ ಪ್ರಕರಣದ ಸಹೋದರ ದಾಖಲಿಸಿದ್ದು ಅದರಲ್ಲಿ ನೀಡಿದ ನೋಟಿಸಿಗೆ ನಾನು ಸಹಿಯನ್ನು ಬೇರೆ ರೀತಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಒಬ್ಬ ಅಮರಯ್ಯ ಇವರು ನನ್ನ ವಿರುದ್ಧ ಒಂದು ಪ್ರಕರಣ ದಾಖಲಿಸುವ ಮೊದಲು ನನಗೆ ನೋಟಿಸ್ ನೀಡಿದ್ದು ಅದಕ್ಕೆ ನಾನು ಬೇರೆ ರೀತಿ ಸಹಿ ಮಾಡಿ ಸ್ವೀಕರಿಸಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ತಂದೆ ಸಹಿ ಮಾಡಿ ಸ್ವೀಕರಿಸಿರುವುದಾಗಿ ಹೇಳುತ್ತಾರೆ. ಕುಂದುಗೋಳ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಸಲ್ಲಿಸಿದ ಪ್ರಕರಣದಲ್ಲಿ ನೀಡಿದ ನೋಟಿಸಿಗೂ ಸಹಿ ಬೇರೆ ರೀತಿ ಮಾಡಿ ಪಡೆದಿರುತ್ತೇನೆ ಅಂದರೆ ಸರಿಯಲ್ಲ. ಸುರಭಿ ಟ್ರೇಡರ್ಸ ಇವರಿಗೆ ನಾನು ರೂ.5,65,000/- ತೊಡಗಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸ್ನೇಹಿತರಿಂದ ಸಾಲದ ರೂಪದಲ್ಲಿ ಹಣ ಪಡೆದು ಸದರಿ ಸಂಸ್ಥೆಯಲ್ಲಿ ಸುಮಾರು 30 ಲಕ್ಷದ ವರೆಗೆ ತೊಡಗಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಸರಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೆ ರೂ.5,65,000/- ಸುರಭಿ ಕಂಪನಿಗೆ ತೊಡಗಿಸಿರುತ್ತೇನೆ. ನನ್ನ ಮುಖ್ಯವಿಚಾರಣೆಯ ಖಂಡಿಕೆ 16 ರಲ್ಲಿ ಕಮೀಶನ್ ಪಡೆಯುವ ಸಲುವಾಗಿ ಪಿರ್ಯಾದಿಗೆ ನನ್ನ ಖಾತೆಗೆ ಸೇರಿದ ಚೆಕ್ ನೀಡಿರುತ್ತೇನೆ ಎಂದು ಬರೆಸಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಖಂಡಿಕೆ 11 ರಲ್ಲಿ ನನ್ನ ಖಾತೆಗೆ ಸೇರಿದ ಚೆಕಗಳು ಕಳೆದಿರುತ್ತವೆ ಎಂದು ಬರೆಸಿರುತ್ತೇನೆ. ಖಂಡಿಕೆ 16 ರಲ್ಲಿ ನಾನು ನನ್ನ ಖಾತೆಗೆ ಸೇರಿದ ಚೆಕಗಳನ್ನು ಕಮೀಶನ್ ಪಡೆಯುವ ಸಲುವಾಗಿ ಪಿರ್ಯಾದಿಗೆ ನೀಡಿದ್ದೆ ಎಂದು ಬರೆಸಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಡಿ.1 ಮತ್ತು 2 ರ ದಾಖಲೆಗಳು ನನಗೆ ಮತ್ತು ಮುರುಗಯ್ಯಸ್ವಾಮಿ ಇವರಿಗೆ ಸಂಬಂಧಿಸಿದ ದಾಖಲೆಗಳು ಅಂದರೆ ಸರಿ. ನಿಡಿ.3 ನನಗೆ ಮತ್ತು ವೀರಯ್ಯ ಇವರಿಗೆ ಸೇರಿದ ದಾಖಲೆ ಅಂದರೆ ಸರಿ. ನಿಡಿ.4 ನನಗೆ ಮತ್ತು ಸೋಮಯ್ಯ ಇವರಿಗೆ ಸೇರಿದ ದಾಖಲೆ ಅಂದರೆ ಸರಿ. ನಿಡಿ.5 ಸೋಮಯ್ಯ ಮತ್ತು ಸಿದ್ದಲಿಂಗೇಶ್ವರ ಇವರಿಗೆ ಸಂಬಂಧಿಸಿದ ದಾಖಲೆ ಅಂದರೆ ಸರಿ. ನಿಡಿ.6 ನನ್ನ ಮತ್ತು ಅಮರನಾಥ ಇವರಿಗೆ ಸೇರಿದ ದಾಖಲೆ ಅಂದರೆ ಸರಿ. ನಿಡಿ.7 ರ ದಾಖಲೆಯನ್ನು ನಾನೇ ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಶಾಲೆಗೆ ಹಾಜರಾಗದೆ ಇದ್ದರು ನಾನೇ ಮುಖ್ಯಗುರುಗಳು

ಇರುವುದರಿಂದ ನಿಡಿ.10 ರಿಂದ 12 ರ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರು ಪಡಿಸಿರುತ್ತೇನೆ ಅಂದರೆ ಸರಿಯಲ್ಲ. ದಿನಾಂಕ 21.02.2017 ರಿಂದ ನನ್ನ ಅನಾರೋಗ್ಯದ ಹಿನ್ನೆಲೆಯಲ್ಲಿ ಗಳಿಕೆ ರಜೆ ಮೇಲೆ ಹೋಗುತ್ತಿರುವುದರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಯಾದಗಿರಿ ಇವರಿಗೆ ಪತ್ರ ಬರೆದಿರುತ್ತೇನೆ ಅಂದರೆ ಸರಿ. ಸದರಿ ಪತ್ರದ ಆಧಾರದ ಮೇಲೆ ನಾನು ಗಳಿಕೆ ರಜೆ ಮೇಲೆ ಹೋಗಿರುತ್ತೇನೆ ಅಂದರೆ ಸರಿ. ದಿನಾಂಕ 21.02.2017 ರಿಂದ 28.02.2017 ವರೆಗೆ ನಾನು ಶಾಲೆಗೆ ಗೈರು ಹಾಜರು ಇದ್ದರು ನಾನು ಶಾಲೆಯಲ್ಲಿ ಹಾಜರಾತಿಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಡಿ.13 ರಂತೆ ನಾನು ಫಹೀದಾ ಮತ್ತು ಇಲಿಯಾಸ್ ಇವರ ವಿರುದ್ಧ ಕಲಗಟ್ಟಿಗಿ ಠಾಣೆಯಲ್ಲಿ ಸಲ್ಲಿಸಿದ ದೂರಿನ ಪ್ರತಿ ಅಂದರೆ ಸರಿ. ನಿಡಿ.14 ಈ ಪ್ರಕರಣದ ಪಿರ್ಯಾದಿ ನಮ್ಮ ಶಾಲೆಗೆ ಮಾಹಿತಿ ಹಕ್ಕು ಅಡಿಯಲ್ಲಿ ಮಾಹಿತಿ ಕೋರಿ ಸಲ್ಲಿಸಿದ ಅರ್ಜಿ ಅಂದರೆ ಸರಿ. ನಿಡಿ.15 ಮತ್ತು 16 ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಅಂದರೆ ಸರಿ. ನಿಡಿ.17 ರಿಂದ 20 ಈ ಪ್ರಕರಣದ ಪಿರ್ಯಾದಿಗೆ ಸಂಬಂಧಿಸಿದ ದಾಖಲೆಗಳು ಈ ಪ್ರಕರಣಕ್ಕೆ ಯಾವುದೇ ರೀತಿಯ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಿಡಿ.21 ನನಗೆ ವೀರಬಸಯ್ಯ ಇವರು ವಕೀಲರ ಮೂಲಕ ನೀಡಿದ ನೋಟಿಸಿನ ಪ್ರತಿ ಅಂದರೆ ಸರಿ. ನನ್ನ ಹೆಂಡತಿ, ನಾನು 30 ಲಕ್ಷ ರೂಪಾಯಿ ಸಾಲ ಮಾಡಿಕೊಂಡು ಕಾಣೆ ಆಗಿರುತ್ತೇನೆ ಎಂದು ಪತ್ರಿಕಾ ಪ್ರಕಟಣೆ ಹೊರಡಿಸಿದ್ದರು ಅಂದರೆ ಸರಿ. ಸದರಿ ಪತ್ರಿಕೆ ಪ್ರಕಟಣೆಯ ಎರಡು ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.15 ಮತ್ತು 16 ಎಂದು ಗುರುತಿಸಲಾಯಿತು. ನಿಡಿ.1 ರಿಂದ 21 ರ ದಾಖಲೆಗಳು ಈ ಪ್ರಕರಣಕ್ಕೆ ಯಾವುದೇ ರೀತಿಯ ಪೂರಕವಾದ ದಾಖಲೆಗಳು ಅಲ್ಲ ಅಂದರೆ ಸರಿಯಲ್ಲ. ನಿಪಿ.7 ಮತ್ತು 8 ರ ದಾಖಲೆಗಳನ್ನು ನಾನು ಪಿರ್ಯಾದಿಗೆ ಸಾಲದ ಭದ್ರತೆ ಬರೆದುಕೊಟ್ಟ ದಾಖಲೆಗಳು ಅಂದರೆ ಸರಿಯಲ್ಲ. ನಾನು ಪಿರ್ಯಾದಿಯಿಂದ ಪಡೆದ ಸಾಲದ ಮರುಪಾವತಿಗಾಗಿ ದಿನಾಂಕ 27.10.2017 ರಂದು ನನ್ನ ಖಾತೆಗೆ ಸೇರಿದ ಸಿಂಡಿಕೇಟ್ ಬ್ಯಾಂಕ್ ಯಾದಗಿರಿ ಶಾಖೆಗೆ ಸೇರಿದ ಚೆಕ್ ರೂ.7,50,000/- ಬರೆದುಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ನಾನು ಪಿರ್ಯಾದಿಯಿಂದ ಯಾವುದೇ ಸಾಲ ಪಡೆದಿಲ್ಲ, ಅದರ ಮರುಪಾವತಿಗಾಗಿ ನಿಪಿ.1 ರ ಚೆಕ್ ನೀಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರಕರಣದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾ.ದಂ.ಗಳು,ಮಾನ್ವಿ**